**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ**

**ಎಸ್.ಸಿ.ನಂ.74/2020**

**ಪಿಡಬ್ಲ್ಯೂ-12(ಸಿಡಬ್ಲ್ಯೂ-09)**

ಸಾಕ್ಷಿದಾರರ ಹೆಸರು : ಸಿದ್ದಣ್ಣ ಹೆಗಡಿಹಾಳ

ತಂದೆಯ ಹೆಸರು : ಶ್ರೀಶೈಲ

ವಯಸ್ಸು : **52** ವರ್ಷ

ಉದ್ಯೋಗ : ಚಾಲಕ

ವಾಸಸ್ಥಳ : ಹಳಗುಣಕಿ, ಇಂಡಿ.

**ಸಾಕ್ಷಿಗೆ ಇಂದು ದಿನಾಂಕ :- 09/10/2025 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

ಪೋಲಿಸರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನನ್ನು ಪಂಚನಾಮೆಗೆ ಪಂಚನಾಗಿ ಕರೆದಿರುವುದಿಲ್ಲ. ನಾನು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿರುವುದಿಲ್ಲ. ನಾನು 4 ನೇ ಆರೋಪಿಯನ್ನು ವಿಜಯಪುರ ಗ್ರಾಮೀಣ ಪೋಲಿಸ್ ಠಾಣೆಯಲ್ಲಿ ನೋಡಿರುವುದಿಲ್ಲ. ಆತ ನನ್ನ ಮುಂದೆ ಯಾವುದೇ ರಕ್ತ ಹತ್ತಿದ ಬಟ್ಟೆಗಳನ್ನು ಪೋಲಿಸರ ಮುಂದೆ ಹಾಜರು ಪಡೆಸಿರುವುದಿಲ್ಲ. ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ. ದಾಖಲೆಯು ಬಟ್ಟೆ ಅಮಾನತ ಪಂಚನಾಮೆ ಆಗಿದ್ದು, ಅದನ್ನು ನಿ.ಪಿ.10 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.10(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ವಿಜಯಪುರ ಗ್ರಾಮೀಣ ಪೋಲಿಸ್ ಠಾಣೆಯಲ್ಲಿ ಮಾಡಿರುತ್ತೇನೆ. ಈಗ ತೋರಿಸಿದ ಫೋಟೋದಲ್ಲಿ ನಾನು ಕಾಣುತ್ತಿದ್ದೇನೆ ಎಂದರೆ ಸರಿ. ಸಾಕ್ಷಿಯು ತನ್ನನ್ನು ನೋಡಿ ಗುರುತಿಸಿದ ಕಾರಣ ಫೋಟೋವನ್ನು ನಿ.ಪಿ.11 ಎಂದು ಆರೋಪಿ ಪರ ವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಯಿತು.

*(ಸರಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು.)*

**ಪಾಟೀ ಸವಾಲುಃ-ಸರಕಾರಿ ಅಭಿಯೋಜಕರವರಿಂದ**

ದಿ: 18.07.2016 ರಂದು ವಿಜಯಪುರ ಗ್ರಾಮೀಣ ವೃತ್ತ ಪೋಲಿಸ ನಿರೀಕ್ಷಕರು ಗ್ರಾಮೀಣ ಪೋಲಿಸ ಠಾಣೆಗೆ ನನ್ನನ್ನು ಮತ್ತು ಚಾಸಾ-8 ರವರನ್ನು ಕರೆಸಿದ್ದರು ಎಂದರೆ ಸರಿಯಲ್ಲ. ಅಲ್ಲಿ ಆರೋಪಿ ಮಿಥುನ ಕಿಶನ ಚವ್ಹಾಣ ಹಾಜರಿದ್ದ ಮತ್ತು ಆತ ಇತರ ಆರೋಪಿತರ ಜೊತೆ ಕೂಡಿ, ಚಂದ್ರಶೇಖರ ತಂದೆ ಫೋಮು ಚವ್ಹಾಣ ಇತನಿಗೆ ಕೊಲೆ ಮಾಡಿದ್ದ ಕಾಲಕ್ಕೆ ಧರಿಸಿದ್ದ ರಕ್ತದ ಕಲೆಗಳಿದ್ದ ಬಟ್ಟೆಗಳನ್ನು ಒಂದು ಕಡೆ ಮುಚ್ಚಿ ಇಟ್ಟಿದ್ದು, ನನ್ನ ಜೊತೆ ಬಂದರೆ ತೋರಿಸಿ ಹಾಜರು ಪಡೆಸುತ್ತೇನೆ ಎಂದು ತಿಳಿಸಿದ ಎಂದರೆ ಸರಿಯಲ್ಲ. ನಂತರ ಆತ ನಮ್ಮನ್ನು ಮತ್ತು ಪೋಲಿಸರನ್ನು ಪೋಲಿಸ್ ಜೀಪನಲ್ಲಿ ಸೋಲಾಪೂರ ರಾಷ್ಟ್ರೀಯ ಹೆದ್ದಾರಿ 13 ಕ್ಕೆ ಕರೆದುಕೊಂಡು ಹೋಗಿ, ಹಂಚನಾಳ ತಾಂಡಾದ ಕಡೆಗೆ ಹೊರಟಾಗ ಜೈನ್ ಮಂದಿರದ ಹತ್ತಿರ ಜೀಪನ್ನು ನಿಲ್ಲಿಸಲು ತಿಳಿಸಿದ ಎಂದರೆ ಸರಿಯಲ್ಲ. ಎಲ್ಲರೂ ಕೆಳಗೆ ಇಳಿದಾಗ ಆರೋಪಿಯು ಮುಂದೆ ಮುಂದೆ ಹೋಗಿ, ಸಿಡಿ ಫೂಲ್ ಕೆಳಗೆ ಕೈ ಹಾಕಿ ಬಟ್ಟೆಗಳನ್ನು ತೆಗೆದು ಪೋಲಿಸರ ಮುಂದೆ ಹಾಜರು ಪಡೆಸಿದ ಎಂದರೆ ಸರಿಯಲ್ಲ. ಅದರಲ್ಲಿ ರಕ್ತದ ಕಲೆಗಳಿದ್ದ ಒಂದು ಚಾಕಲೇಟ ಬಣ್ಣದ ಟೀ ಶರ್ಟ ಮತ್ತು ನೀಲಿ ಜೆನ್ಸ ಪ್ಯಾಂಟ ಇತ್ತು ಎಂದರೆ ಸರಿಯಲ್ಲ. ಪೋಲಿಸರು ಅವುಗಳನ್ನು ನಮ್ಮ ಸಮಕ್ಷಮ ಸಂಜೆ 5.30 ರಿಂದ 6.00 ಗಂಟೆವರೆಗೆ ನಿ.ಪಿ.10 ರಂತೆ ಫಂಚನಾಮೆ ಮಾಡಿ, ಅಮಾನತ ಪಡೆಸಿಕೊಂಡರು ಎಂದರ ಸರಿಯಲ್ಲ. ಆ ಸಮಯದಲ್ಲಿ ಹಾಜರಿದ್ದು, ನಿ.ಪಿ.10 ಕ್ಕೆ ಸಹಿ

ಮಾಡಿರುತ್ತೇನೆ ಎಂದರೆ ಸರಿ. ಆ ಸಮಯದಲ್ಲಿ ಪೋಲಿಸರು ಫೋಟೋಗಳನ್ನು ತೆಗೆಸಿಕೊಂಡಿರುತ್ತಾರೆ ಎಂದರೆ ಸರಿ. ಆರೋಪಿತರಿಗೆ ಹೆದರಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:- ಶ್ರೀ ಎಸ್.ಆರ್.ಕೆ., ವಕೀಲರಿಂದ ಆರೋಪಿತರ ಪರಃ**

ನಿ.ಪಿ.10 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಅದನ್ನು ನನಗೆ ಓದಿ ಹೇಳಿರುವುದಿಲ್ಲ. ನಾನು ಬಟ್ಟೆಗಳನ್ನು ನೋಡಿರುವುದಿಲ್ಲ.

**ಮರು ವಿಚಾರಣೆ:- ಇಲ್ಲಾ.**

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

**Sd/-**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ**

**ಎಸ್.ಸಿ.ನಂ.74/2020**

**ಪಿಡಬ್ಲ್ಯೂ- 13(ಸಿಡಬ್ಲ್ಯೂ-37)**

ಸಾಕ್ಷಿದಾರರ ಹೆಸರು : ಮಲ್ಲನಗೌಡ ಪಾಟೀಲ

ತಂದೆಯ ಹೆಸರು : ಮುದಿಗೌಡ

ವಯಸ್ಸು : **62** ವರ್ಷ

ಉದ್ಯೋಗ : ನಿವೃತ್ತ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು

ವಾಸಸ್ಥಳ : ವಿಜಯಪುರ

**ಸಾಕ್ಷಿಗೆ ಇಂದು ದಿನಾಂಕ :- 09/10/2025 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

ನಾನು ದಿ: 08.08.2016 ರಿಂದ 2023 ರವರೆಗೆ ಲೋಕೋಪಯೋಗಿ ಇಲಾಖೆ, ವಿಜಯಪುರ ವಿಭಾಗದಲ್ಲಿ ಸಹಾಯಕ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 31.08.2016 ರಂದು ನಾನು ಸಿಪಿಐ ಗ್ರಾಮೀಣ ವೃತ್ತ ವಿಜಯಪುರ ಇವರಿಂದ ವಿಜಯಪುರ ರೂರಲ್ ಪೋಲಿಸ್ ಠಾಣಾ ಅಪರಾಧ ಸಂಖ್ಯೆ 205/2014 ಕ್ಕೆ ಸಂಬಂಧಿಸಿದಂತೆ ಕೃತ್ಯ ಸ್ಥಳಕ್ಕೆ ಭೇಟಿ ನೀಡಿ, ನಕಾಶೆಯನ್ನು ತಯಾರಿಸಿ ಕೊಡುವಂತೆ ಮನವಿಯನ್ನು ನಮ್ಮ ಕಚೇರಿಯಲ್ಲಿ ಸ್ವೀಕರಿಸಿರುತ್ತೇವೆ. ಸದರಿ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.12 ಎಂದು ಗುರುತಿಸಲಾಯಿತು. ಅದೇ ದಿನ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ನಕಾಶೆಯನ್ನು ತಯಾರಿಸಿ ಕೊಡುವಂತೆ ಸೂಚಿಸಿರುತ್ತಾರೆ. ಅದರಂತೆ ದಿ: 09.09.2016 ರಂದು ಚಾಸಾ-35 ರವರೊಂದಿಗೆ ಕೃತ್ಯ ಸ್ಥಳಕ್ಕೆ ಭೇಟಿ ನೀಡಿ, ಸದರಿಯವರು ತೋರಿಸಿದ, ಹಂಚನಾಳ ತಾಂಡಾದ ಮನೆಯಲ್ಲಿ ಪರಿಶೀಲಿಸಿ, ಕಚ್ಚಾ

ನಕಾಶೆಯನ್ನು ತಯಾರಿಸಿಕೊಂಡಿರುತ್ತೇನೆ. ನಂತರ ಕಚೇರಿಗೆ ವಾಪಸ್ಸಾಗಿ ನಕಾಶೆಯನ್ನು ತಯಾರಿಸಿ ಸಿಪಿಐ ಗ್ರಾಮೀಣ ವೃತ್ತ ವಿಜಯಪುರ ಇವರಿಗೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ನಕಾಶೆಯನ್ನು ನಾನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.13 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.13(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು:- ಶ್ರೀ ಎಸ್.ಆರ್.ಕೆ., ವಕೀಲರಿಂದ ಆರೋಪಿತರ ಪರಃ**

ನಿ.ಪಿ.13 ರಲ್ಲಿ ನಾನು ಶಾಖಾಧಿಕಾರಿ ಎಂದು ಸಹಿ ಮಾಡಿರುತ್ತೇನೆ ಎಂದರೆ ಸರಿ. ನಿ.ಪಿ.13 ಅಳತೆ ಪಟ್ಟಿಗೆ ಅನುಗುಣವಾಗಿ ಇಲ್ಲ ಎಂದರೆ ಸರಿ. ನಿ.ಪಿ.13 ರ ಪ್ರಕಾರ ಸದರಿ ಮನೆಯ ಮುಖ್ಯ ದ್ವಾರ ಪಶ್ಚಿಮಕ್ಕೆ ಇತ್ತು ಎಂದರೆ ಸರಿ. ಸಾಕ್ಷಿಯು ಇನ್ನೊಂದು ದ್ವಾರ ಉತ್ತರಕ್ಕೆ ಇತ್ತು ಎಂದು ನುಡಿಯುತ್ತಾರೆ. Collapsible gate ಆದ ತಕ್ಷಣ entrance ಹಾಲ್ ಇದೆ ಎಂದರೆ ಸಾಕ್ಷಿಯು ಈಗ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಮನೆಯ ಮುಖ್ಯ ದ್ವಾರದಲ್ಲಿ ಪಶ್ಚಿಮಕ್ಕೆ ಕಟ್ಟೆ ಇದೆ ಎಂದರೆ ಸರಿ. ಮನೆಯ ಒಳಗಡೆ ಬರಬೇಕಾದರೆ ಕಟ್ಟೆಯನ್ನು ದಾಟಿ ಬರಬೇಕು ಎಂದರೆ ಸರಿ. ಸದರಿ ಮನೆಯ ಮಾಲಿಕರ ಬಗ್ಗೆ ನಾನು ತಿಳಿದುಕೊಂಡಿಲ್ಲ. ನಿ.ಪಿ.13 ನ್ನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಕಚೇರಿಯಲ್ಲಿ ಕುಳಿತು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.13 ರಲ್ಲಿ ತೋರಿಸಿರುವ ರಸ್ತೆಯು ಉತ್ತರ-ದಕ್ಷಿಣವಾಗಿದೆ ಎಂದರೆ ಸರಿ. ರಾಷ್ಟ್ರೀಯ ಹೆದ್ದಾರಿ 13 ರಿಂದ ಸದರಿ ರಸ್ತೆ ಎಷ್ಟು ದೂರದಲ್ಲಿದೆ ಎಂದು ನಾನು ನಿ.ಪಿ.13 ರಲ್ಲಿ ನಮೂದಿಸಿರುವುದಿಲ್ಲ. ನಿ.ಪಿ.13 ರಲ್ಲಿ ತೋರಿಸಿದ ಸ್ಥಳ ಈ ಪ್ರಕರಣದ ಘಟನಾ ಸ್ಥಳ ಅಲ್ಲ ಎಂದರೆ ನನಗೆ ಗೊತ್ತಿಲ್ಲ.

**ಪಿಡಬ್ಲ್ಯೂ- 13(ಸಿಡಬ್ಲ್ಯೂ-37)**

**ಮರು ವಿಚಾರಣೆ: ಸರಕಾರಿ ಅಭಿಯೋಜಕರಿಂದ:-**

ಪೋಲಿಸ ವೃತ್ತ ನಿರೀಕ್ಷಕರು ಕಳುಹಿಸಿದ ಮನವಿ ಪತ್ರದಲ್ಲಿ 2 ನೇ ಆರೋಪಿಯ ಮನೆಯಲ್ಲಿ ಪರಿಶೀಲಿಸಿ, ನಕಾಶೆ ತಯಾರಿಸಬೇಕೆಂದು ಕೇಳಿಕೊಂಡಿರುತ್ತಾರೆ ಎಂದರೆ ಸರಿ.

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

**Sd/-**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ವಿಜಯಪುರ.

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ**

<u>ಎಸ್.ಸಿ.ನಂ.74/2020</u>

<u>**ಪಿಡಬ್ಲ್ಯೂ- 14(ಸಿಡಬ್ಲ್ಯೂ-34)**</u>

ಸಾಕ್ಷಿದಾರರ ಹೆಸರು : ಶಿವಾನಂದ ಬೊಮ್ಮನಹಳ್ಳೀ

ತಂದೆಯ ಹೆಸರು : ಯಲ್ಲಪ್ಪ

ವಯಸ್ಸು : **44** ವರ್ಷ

ಉದ್ಯೋಗ : ಸಿಪಿಸಿ **837** ಗಾಂಧಿಚೌಕ ಪಿಎಸ್.ವಿಜಯಪುರ

ವಾಸಸ್ಥಳ : ವಿಜಯಪುರ

<u>**ಸಾಕ್ಷಿಗೆ ಇಂದು ದಿನಾಂಕ** :- 09/10/2025 **ರಂದು ಪ್ರಮಾಣೀಕರಿಸಲಾಯಿತು.**</u>

<u>**ಮುಖ್ಯ ವಿಚಾರಣೆ** :- **ಸರಕಾರಿ ಅಭಿಯೋಜಕರವರಿಂದ.**</u>

ನಾನು ಜನೇವರಿ 2016 ರಿಂದ 2024 ರವರೆಗೆ ನಾನು ವಿಜಯಪುರ ಗ್ರಾಮೀಣ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 08.07.2016 ರಂದು ಮೃತ ಚಂದ್ರಶೇಖರನ ಮರಣೋತ್ತರ ಪರೀಕ್ಷೆ ಆದ ನಂತರ ಶವದ ಮೇಲೆ ಇದ್ದ ಬಟ್ಟೆಗಳನ್ನು ಮತ್ತು ವಸ್ತುಗಳನ್ನು ವೈದ್ಯರಿಂದ ಪಡೆದುಕೊಂಡು, ಚಾಸಾ-42 ರವರ ಮುಂದೆ ತಂದು ಹಾಜರು ಪಡಿಸಿರುತ್ತೇನೆ. ಸದರಿ ಬಟ್ಟೆಗಳನ್ನು ಚಾಸಾ-42 ರವರು ಪಂಚರ ಸಮಕ್ಷಮ ಅಮಾನತ ಪಡೆಸಿಕೊಂಡಿರುತ್ತಾರೆ. ಪಂಚನಾಮೆಯನ್ನು ಮಧ್ಯಾಹ್ನ 12.30 ರಿಂದ 1.30 ರವರೆಗೆ ಜರುಗಿಸಿರುತ್ತಾರೆ. ಬಟ್ಟೆಗಳನ್ನು ಮತ್ತು ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಮು.ಮಾ.6 ರಿಂದ 9, ಹಾಗೂ ಮು.ಮಾ.11 ರಿಂದ 14 ಎಂದು ಗುರುತಿಸಲಾಗಿವೆ. ಅವುಗಳನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ.

**<u>ಪಾಟೀ ಸವಾಲು:- ಶ್ರೀ ಎಸ್.ಆರ್.ಕೆ., ವಕೀಲರಿಂದ ಆರೋಪಿತರ ಪರಃ</u>**

ನಾನು ಅಲ್-ಅಮೀನ ಆಸ್ಪತ್ರೆಯಿಂದ ಮೃತರ ಮೈಮೇಲೆ ಇದ್ದ ಬಟ್ಟೆಗಳನ್ನು ತೆಗೆದುಕೊಂಡು ಹೋಗಿರುತ್ತೇನೆ. ನಾನು ಆಸ್ಪತ್ರೆಗೆ ಬೆಳಿಗ್ಗೆ 10.00 ಗಂಟೆಗೆ ಹೋಗಿರುತ್ತೇನೆ. ನನಗೆ ಬಟ್ಟೆಗಳನ್ನು ವೈದ್ಯರು ಬೆಳಿಗ್ಗೆ ಅಂದಾಜು 11.00 ಗಂಟೆಗೆ ನೀಡಿರುತ್ತಾರೆ. ನಾನು ಬೆಳಿಗ್ಗೆ 10.00 ಗಂಟೆಯಿಂದ ಶವದ ಬೆಂಗಾವಲಿ ನೇಮಕವಾಗಿದ್ದೆ. ನಾನು ಮೃತರ ಮೈಮೇಲೆ ಇದ್ದ ಬಟ್ಟೆಗಳನ್ನು ತೆಗೆದುಕೊಂಡು ಹೋದ ಬಗ್ಗೆ ವರದಿಯನ್ನು ನೀಡಿರುವುದಿಲ್ಲ, ಆದರೆ ಹೇಳಿಕೆಯನ್ನು ನೀಡಿರುತ್ತೇನೆ. ನಾನು ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-42 ರವರು ನನ್ನ ಮುಂದೆ ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಮು.ಮಾ.6 ರಿಂದ 9, ಹಾಗೂ ಮು.ಮಾ.11 ರಿಂದ 14 ಮೃತನಿಗೆ ಸಂಬಂಧಿಸಿದಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲಾ.**

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

**Sd/-**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ**

**ಎಸ್.ಸಿ.ನಂ.74/2020**

**ಪಿಡಬ್ಲ್ಯೂ-15 (ಸಿಡಬ್ಲ್ಯೂ-36)**

ಸಾಕ್ಷಿದಾರರ ಹೆಸರು : ಅರುಣಕುಮಾರ ಜಂಗಮಶೆಟ್ಟಿ

ತಂದೆಯ ಹೆಸರು : ಗುರುರಾಜ

ವಯಸ್ಸು : **46** ವರ್ಷ

ಉದ್ಯೋಗ : ಸಿ.ಹೆಚ್ ಸಿ ನಂ.**1256** ತಿಕೋಟಾ ಪಿಎಸ್.

ವಾಸಸ್ಥಳ : ತಿಕೋಟಾ

**ಸಾಕ್ಷಿಗೆ ಇಂದು ದಿನಾಂಕ :- 09/10/2025 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

ಅಗಸ್ಟ 2011 ರಿಂದ ಮಾರ್ಚ್ 2017 ರವರೆಗೆ ನಾನು ವಿಜಯಪುರ ಗ್ರಾಮೀಣ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 07.07.2016 ರಂದು ಗ್ರಾಮೀನ ಪೋಲಿಸ್ ಠಾಣಾ ಅಪರಾಧ ಸಂಖ್ಯೆ 205/2016 ಕ್ಕೆ ಸಂಬಂಧಿಸಿದಂತೆ ಪ್ರಥಮ ವರ್ತಮಾನ ವರದಿಯನ್ನು ಮತ್ತು ಮೂಲ ಪಿರ್ಯಾದಿಯನ್ನು ರಾತ್ರಿ 9.00 ಗಂಟೆಗೆ ಪಡೆದುಕೊಂಡು, ರಾತ್ರಿ 9.30 ಗಂಟೆಗೆ ನ್ಯಾಯಾಧೀಶರ ಗೃಹ ಕಚೇರಿಯಲ್ಲಿ ಸಲ್ಲಿಸಿರುತ್ತೇನೆ. ನಾನು ನ್ಯಾಯಾಧೀಶರ ಮುಂದೆ ಸಲ್ಲಿಸಿದ ಪ್ರಥಮ ವರ್ತಮಾನ ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಪ್ರ.ವ.ವರದಿಯನ್ನು ನೊಡಿ ಗುರುತಿಸಿದ್ದು, ಅದನ್ನು ನಿ.ಪಿ.14 ಎಂದು ಗುರುತಿಸಲಾಯಿತು.

**ಪಾಟೀ ಸವಾಲು:- ಶ್ರೀ ಎಸ್.ಆರ್.ಕೆ., ವಕೀಲರಿಂದ ಆರೋಪಿತರ ಪರಃ**

ತನಿಖಾಧಿಕಾರಿ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ನನ್ನ ಹೇಳಿಕೆಯಲ್ಲಿ ರಾತ್ರಿ 10.30 ಗಂಟೆಗೆ ನ್ಯಾಯಾಧೀಶರ ಮುಂದೆ ಹಾಜರುಪಡಿಸಿರುತ್ತೇನೆ ಎಂದು

ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅದು ಬೆರಳಚ್ಚು ತಪ್ಪಿನಿಂದ ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು ನಿ.ಪಿ.14 ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಧೀಶರ ಮುಂದೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲಾ.**

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

**Sd/-**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ವಿಜಯಪುರ.